**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆಯ ನಡವಳಿಗಳು**

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ನ್ಯಾಕ್ ಪ್ರಕ್ರಿಯೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಅನುದಾನ ಬಿಡುಗಡೆ ಆದೇಶ ಸಂಖ್ಯೆ ಇಡಿ/47/ಹೆಚ್‌ಪಿಸಿ/2017, ಬೆಂಗಳೂರು ದಿನಾಂಕ: 06.07.2017.
2. ಇಲಾಖೆಯ ನ್ಯಾಕ್ ಮತ್ತು ರಾಜ್ಯ ಗುಣಮಟ್ಟ ಭರವಸಾ ಕೋಶದ ಸಮನ್ವಯಾಧಿಕಾರಿಗಳ ಸಲ್ಲಿಕೆ ದಿನಾಂಕ: 28.08.2017.

**********

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಮೌಲ್ಯಮಾಪನ ಮತ್ತು ಮರು ಮೌಲ್ಯಮಾಪನಕ್ಕೆ ಒಳಪಡುವುದು ಅವಶ್ಯವಿರುವ ಹಿನ್ನೆಲೆಯಲ್ಲಿ ಮಾನ್ಯತೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನವನ್ನು ಉಲ್ಲೇಖ(1) ರ ಸರ್ಕಾರಿ ಆದೇಶದಲ್ಲಿ ಇಲಾಖೆಗೆ 2017-18 ರ ಸಾಲಿನಲ್ಲಿ **"ರಾಷ್ಟ್ರೀಯ ಅಂಗೀಕೃತ ಪರಿಷತ್ತು"** ಕಾರ್ಯಕ್ರಮದಡಿಯಲ್ಲಿ ಲೆಕ್ಕಶೀರ್ಷಿಕೆ 2202-03-112-0-09-059(ಯೋ) ರಲ್ಲಿ ಒದಗಿಸಲಾಗಿರುತ್ತದೆ. ಸದರಿ ಅನುದಾನದ ಮಿತಿಯೊಳಗೆ ಗುರುತಿಸಲಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ IIQA/LOI, Documentation & ಮೌಲ್ಯಮಾಪನ ಶುಲ್ಕ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/06/ ನ್ಯಾಕ್.ಅಬಿ/2017-18, ಬೆಂಗಳೂರು ದಿ:01.09.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ನ್ಯಾಕ್ ಮಾನ್ಯತೆಗಾಗಿ ಮೌಲ್ಯಮಾಪನ ಮತ್ತು ಮರು ಮೌಲ್ಯಮಾಪನಕ್ಕೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ IIQA/LOI ,Documentation & ಮೌಲ್ಯಮಾಪನ ಶುಲ್ಕ ವೆಚ್ಚ ಭರಿಸಲು ಅನುದಾನವನ್ನು **"ರಾಷ್ಟ್ರೀಯ ಅಂಗೀಕೃತ ಪರಿಷತ್ತು"** ಕಾರ್ಯಕ್ರಮದಡಿಯಲ್ಲಿ ಲೆಕ್ಕಶೀರ್ಷಿಕೆ **2202-03-112-0-09-059(ಯೋ)** ರಡಿಯಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ ಹಾಗೂ ಸದರಿ ಅನುದಾನವನ್ನು ನಿಯಮಾನುಸಾರ ಬಳಸಿಕೊಳ್ಳಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ.

| ಕ್ರ.ಸಂ | ಕಾಲೇಜಿನ ಹೆಸರು | ಮೌಲ್ಯಮಾಪನ ಶುಲ್ಕ |
|---|---|---|
| 1. | ಸರ್ಕಾರಿ ಪದವಿ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು-560036. | 217000 |
| 2. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ – 572215 | 217000 |
| 3. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು – 563 130 | 217000 |
| 4. | ಬಾಲಕರ ಸರ್ಕಾರಿ ಪದವಿ ಕಾಲೇಜು, ಚಿಂತಾಮಣಿ – 563 125 | 217000 |
| 5. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ – 562 101 | 217000 |
| 6. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ-571 313 | 217000 |
| 7. | ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ-573 201 | 217000 |

| | | |
|---|---|---|
| 8. | ಶ್ರೀಮತಿ ಇಂದಿರಗಾಂಧಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸಾಗರ-577401 | 217000 |
| 9. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ-577527 | 217000 |
| 10. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು | 217000 |
| 11. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಂಕರನಾರಾಯಣ-576227 ಕುಂದಾಪುರ ತಾ।।, ಉಡುಪಿ ಜಿಲ್ಲೆ | 217000 |
| 12. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ-571234 | 217000 |
| 13. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸವಣೂರು - 581 118 | 217000 |
| 14. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳಿಯಾಳ - 581 329 | 217000 |
| 15. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿತ್ತಾಪುರ - 585 211 | 217000 |
| | ಒಟ್ಟು ಅನುದಾನ ರೂ | 32,55,000 |
| | ಮೂವತ್ತೆರಡು ಲಕ್ಷದ ಐವತ್ತೈದು ಸಾವಿರ ಮಾತ್ರ | |

<u>ಪ್ರಸ್ತುತ ವರ್ಷದಲ್ಲಿ ಮಾನ್ಯತೆ ಮುಗಿಯುವ ಕಾಲೇಜುಗಳು</u>

| ಕ್ರ.ಸಂ | ಕಾಲೇಜಿನ ಹೆಸರು | IIQA/LOI | Documentation | ಮೌಲ್ಯಮಾಪನ ಶುಲ್ಕ | ಒಟ್ಟು ಅನುದಾನ ರೂ |
|---|---|---|---|---|---|
| 1. | ಸರ್ಕಾರಿ ಕಲಾ ಕಾಲೇಜು, ಹಾಸನ-573 201 | 29500 | 15000 | 217000 | 261500 |
| 2. | ಡಾ.ಜಿ.ಶಂಕರ್ ಬಾಲಕಿಯರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು & ಸ್ನಾತಕೋತ್ತರ ಕೇಂದ್ರ, ಅಜ್ಜರಕಾಡು ಉಡುಪಿ 576106. | 29500 | 15000 | 217000 | 261500 |
| 3. | ಸರ್ಕಾರಿ ಮಹಿಳಾ ಕಾಲೇಜು, ಬೈಲಹೊಂಗಲ 591 102 | 29500 | 15000 | 217000 | 261500 |
| 4. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಲ್ಬರ್ಗಾ - 585 105 | 29500 | 15000 | 217000 | 261500 |
| 5. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಮಲಾಪುರ - 585 313 | 29500 | 15000 | 217000 | 261500 |
| | ಒಟ್ಟು ಅನುದಾನ ರೂ | | | | 13,07,500 |
| | ಹದಿಮೂರು ಲಕ್ಷದ ಏಳು ಸಾವಿರದ ಐನೂರು ಮಾತ್ರ | | | | |

| | | |
|---|---|---|
| 1 | ನ್ಯಾಕ್ ಮರುಮೌಲ್ಯಮಾಪನ ಶುಲ್ಕ ಭರಿಸಲು ಕಾಲೇಜುಗಳಿಗೆ ಒದಗಿಸಿದ ಒಟ್ಟು ಅನುದಾನ | 32,55,000 |
| 2 | ಪ್ರಸ್ತುತ ವರ್ಷದಲ್ಲಿ ನ್ಯಾಕ್ ಮಾನ್ಯತೆ ಮುಗಿದು ಪುನ: ಮಾನ್ಯತೆಗೆ ಒಳಪಡಬೇಕಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಒದಗಿಸಿದ ಅನುದಾನ | 13,07,500 |
| | ಒಟ್ಟು ಮೊತ್ತ ರೂ | 45,62,500 |
| | ನಲವತ್ತೈದು ಲಕ್ಷದ ಅರವತ್ತೆರಡು ಸಾವಿರದ ಐನೂರು ರೂ.ಗಳು ಮಾತ್ರ | |

<u>ಷರತ್ತುಗಳು:-</u>

1. ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ (ಕೆ.ಟಿ.ಪಿ.ಪಿ) ಮತ್ತು ಅದರಡಿಯಲ್ಲಿ ನಿಯಮಗಳನ್ನು ಚಾಚು ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ಈ ವೆಚ್ಚವನ್ನು 2018ರ ಮಾರ್ಚ್ ಮಾಹೆಯೊಳಗೆ ಎಲ್ಲಾ ಪ್ರಚಲಿತ ನಿಯಮಗಳನ್ನು ಪಾಲಿಸಿ ಭರಿಸುವುದು.
3. ಬಿಡುಗಡೆ ಮಾಡಿರುವ ಅನುದಾನವನ್ನು ನ್ಯಾಕ್ ಮೌಲ್ಯಮಾಪನ ಶುಲ್ಕ( ರೂ 29500+217000) ಗಳನ್ನು ಡಿ.ಡಿ ಮುಖಾಂತರ Director-NAAC ಇವರ ಹೆಸರಿಗೆ ಪಾವತಿಸುವುದು.
4. ಈ ಅನುದಾನವನ್ನು ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಗಳಿಗೆ ಮಾತ್ರ ಬಳಸತಕ್ಕದ್ದು.

ಆದೇಶ ಸಂಖ್ಯೆ:ಕಾಶಿಇ/06/ ನ್ಯಾಕ್.ಅಜಿ/2017-18, ಬೆಂಗಳೂರು

5. ಬಿಡುಗಡೆ ಮಾಡಲಾದ ಅನುದಾನದ ಖರ್ಚು-ವೆಚ್ಚಗಳನ್ನು ಲೆಕ್ಕ ತಪಾಸಣೆಗೆ ಒಳಪಡಿಸತಕ್ಕದ್ದು.
6. ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಆರ್ಥಿಕ ಸಂಹಿತೆ, ನಿಯಮ 161 ರನ್ವಯ ನಿಗಧಿತ ನಮೂನೆಯಲ್ಲಿಯೇ "ಹಣ ಬಳಕೆಯ ಪ್ರಮಾಣ ಪತ್ರ" ಗಳನ್ನು ಸಿದ್ಧಪಡಿಸಿ, ಪ್ರಾದೇಶಿಕ ಜಂಟಿ ನಿರ್ದೇಶಕರ ಮೇಲು ಸಹಿಯೊಂದಿಗೆ ಕಡ್ಡಾಯವಾಗಿ 2018ರ ಏಪ್ರಿಲ್ ಮಾಹೆಯ ಅಂತ್ಯದೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ, ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಈ ಷರತ್ತುಗಳು ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

*"ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ"*

ಕಾಲೇಜು ಶಿಕ್ಷಣ ನಿರ್ದೇಶಕರು

<u>ಇವರಿಗೆ:</u>

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಗುಲ್ಬರ್ಗಾ ಮತ್ತು ಧಾರವಾಡ ಮಾಹಿತಿ ಹಾಗೂ ತಮ್ಮ ವ್ಯಾಪ್ತಿಯ ಕಾಲೇಜುಗಳ ಪೀರ್ ತಂಡದ ಭೇಟಿ ದಿನದಂದು ಕಾಲೇಜಿನಲ್ಲಿ ಉಪಸ್ಥಿತರಿರಲು ಸೂಚಿಸಲಾಗಿದೆ.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್‌ಖಜಾನೆ, ಬೆಂಗಳೂರು.
4. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ಸಮನ್ವಯಾಧಿಕಾರಿಗಳು-ರಾಜ್ಯ ಗುಣಮಟ್ಟ ಭರವಸಾ ಕೋಶ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು..
7. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಆದೇಶವನ್ನು ಇಲಾಖೆಯ ವೆಬ್-ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
8. ಕಛೇರಿ ಪ್ರತಿ.